# KARNATAKA LOKAYUKTA, BENGALURU

No: COMPT-/UPLOK/BGM-2077/2022/ARE-5 Date: 04-06-2022

## ORDER

During my visit (on 23.05.2022) to the Government General Hospital, Ilakal, Bagalkote District, the general public have made grievance about the Air Pollution being caused on account of the dust and smoke emanating from the brick factories which are located near Government Primary School, Gowleraguwi Oni, Ilakal, Bagalkote District. Therefore, I had directed the Superintendent of Police, Karnataka Lokayukta, Vijayapura/Bagalkote to inspect the said School and submit a report. Accordingly, Superintendent of Police, Karnataka Lokayukta, Vijayapura/Bagalkote visited the said School and has submitted a report dated 25.05.2022 which reads as under:-

*ಇವರಿಗೆ,*

*ಗೌರವಾನ್ವಿತ ಉಪಲೋಕಾಯುಕ್ತರು,*
*ಕರ್ನಾಟಕ ರಾಜ್ಯ,*
*ಬೆಂಗಳೂರು.*

*ಮಾನ್ಯರೆ,*

ವಿಷಯ : ಬಾಗಲಕೋಟ ಜಿಲ್ಲೆಯ ಇಲಕಲ್ ನಗರದ ಗೌಳೇರಗುಡಿಯ ಓಣಿಯ ಸರಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ವರದಿ ಸಲ್ಲಿಸುವ ಕುರಿತು.

ಉಲ್ಲೇಖ: ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ.ಲೋಕ್/ಉಪಲೋಕ್-1/ಪ್ರವಾಸ/2022-23 ದಿನಾಂಕ; 17.05.2022.

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯರವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಮಾನ್ಯರವರು ದಿ:23-05-2022 ರಂದು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕ ಸರ್ಕಾರಿ ಆಸ್ಪತ್ರೆ ಹಾಗೂ ಇಲಕಲ್ಲ ತಾಲೂಕ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿದ ಕಾಲಕ್ಕೆ ನಾನು ಹಾಗೂ ಡಿಎಸ್‌ಪಿ, ಕಲೋ, ಬಾಗಲಕೋಟ ಹಾಗೂ ಪಿಐ, ಇವರುಗಳು ಹಾಜರಿದ್ದು, ಇಲಕಲ್ಲ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಿದ್ದ ವೇಳೆ **"ಇಂದು ಸಂಜೆ ಪತ್ರಿಕೆ"** ವರದಿಗಾರ ಇಲಕಲ್ ನಗರದ ಗೌಳೇರಗುಡಿಯ ಓಣಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ ಹತ್ತಿರ ಅನಧೀಕೃತ ಇಟ್ಟಂಗಿ ಭಟಿಗಳು ನಡೆಸುತ್ತಿದ್ದು, ಇದರಿಂದ ಬರುವ ಕಾರ್ಬನ್ ಮಿಶ್ರಿತ ಧೂಳಿನಿಂದ ಮಕ್ಕಳ ಊಟದಲ್ಲಿ ವಿಷ ಮಿಶ್ರಿತಗೊಂಡು ಮಕ್ಕಳಿಗೆ ಆರೋಗ್ಯ ಸಮಸ್ಯೆ ಉಂಟಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾಕಷ್ಟು ಸಾರಿ ಮನವಿ ಮಾಡಿದರು ಕೂಡಾ ಮತ್ತು ಮಾಧ್ಯಮದಲ್ಲಿ ಪ್ರಸಾರ ಮಾಡಿದ್ದರು ಕೂಡಾ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ತಾವು ಈ ಸಮಸ್ಯೆಯನ್ನು ಬಗೆಹರಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಮಾನ್ಯರವರಿಗೆ ಭೇಟಿಯಾಗಿ ಮನವಿ ಮಾಡಿಕೊಂಡಿದ್ದರ ಮೇರೆಗೆ ಈ ವಿಷಯದ ಕುರಿತು ಮಾನ್ಯರವರು ಗೌಳೇರಗುಡಿಯ ಓಣಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ಸ್ಥಳ ಪರಿಶೀಲನೆ ಮಾಡಿ ಅಲ್ಲಿ ಇರುವ ಸಮಸ್ಯೆಗಳ ಬಗ್ಗೆ ತಿಳಿದುಕೊಂಡು ವರದಿ ಸಲ್ಲಿಸುವಂತೆ ಮೌಖಿಕವಾಗಿ ನನಗೆ ಹೇಳಿದ್ದು ಇರುತ್ತದೆ.

ಮಾನ್ಯರವರ ಮೌಖಿಕ ಆದೇಶದ ಮೇರೆಗೆ ನಾನು ಹಾಗೂ ಬಾಗಲಕೋಟ ಡಿಎಸ್‌ಪಿ ಮತ್ತು ಪಿಐ, ರವರೊಂದಿಗೆ ಇಲಕಲ್ಲ ನಗರದ ಗೌಳೇರಗುಡಿಯ ಓಣಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ್ದು ಭೇಟಿ ಕಾಲಕ್ಕೆ ನಗರಸಭೆ ಪೌರಾಯುಕ್ತರು ಶ್ರೀ ರಾಮಕೃಷ್ಣ ಸಿದ್ದಣ್ಣಕೊಳ್ಳ, ಬಿ.ಇ.ಓ. ಶ್ರೀ ಎಂ. ಜಿ. ಬೆಳ್ಳಣ್ಣವರ್ ಹಾಗೂ ನಗರಸಭೆಯ

ಸದಸ್ಯರಾದ ಶ್ರೀಮತಿ ರೇಷ್ಮಾ ಮಾರಬಸರಿ ಇವರು ಹಾಜರಿದ್ದು ಪ್ರಾಥಮಿಕ ಶಾಲೆಯನ್ನು ಪರಿಶೀಲನೆ ಮಾಡಿದ್ದು ಇಲ್ಲಿ 1 ರಿಂದ 7 ನೇ ತರಗತಿಯವರಿಗೆ ಶಾಲೆ ನಡೆಯುತ್ತಿದ್ದು, ಈ ಶಾಲೆಯಲ್ಲಿ ಹಿಂದುಳಿದ ಮತ್ತು ಬಡ ಮಕ್ಕಳು ಅಭ್ಯಾಸ ಮಾಡುತ್ತಿರುವದಾಗಿ ಶಾಲೆಯ ಮುಖ್ಯ ಗುರುಗಳಾದ ಬಿ.ಪಿ.ಕಿರಗಿ ತಿಳಿಸಿದರು. ಅಲ್ಲದೆ ಸಹ ಶಿಕ್ಷಕರ ಹಾಗೂ ಶಾಲೆಯ ಮಕ್ಕಳ ಸಮಸ್ಯೆಗಳನ್ನು ಆಲಿಸಿ ಸದರಿ ಶಾಲೆಯಲ್ಲಿ ಸುಮಾರು 150 ರಿಂದ 200 ರವರೆಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಲಿಯುತ್ತಿರುತ್ತಾರೆ. ತರಗತಿಯ ಕೊಠಡಿಗಳನ್ನು ಪರಿಶೀಲಿಸಲಾಗಿ ಗೋಡೆಗಳಿಗೆ ಧೂಳು ಮೆತ್ತಿರುವುದು ಕಂಡು ಬಂದಿದ್ದು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿ ಊಟ ಮಾಡುವಾಗ ಇಟ್ಟಂಗಿ ಭಟಿಯ ಧೂಳು ಬರುವುದಾಗಿ ಅಡುಗೆ ಸಹಾಯಕರು ತಿಳಿಸಿರುತ್ತಾರೆ. ಈ ರೀತಿ ಕಲುಶಿತ ಧೂಳಿನಿಂದ ಮಕ್ಕಳ ಹಾಗೂ ಶಿಕ್ಷಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು ಕೂಡಲೇ ಇಟ್ಟಂಗಿ ಭಟಿಗಳನ್ನು ಸ್ಥಗಿತಗೊಳಿಸುವಂತೆ ಪೌರಾಯುಕ್ತರಿಗೆ ಸದರಿ ಶಾಲೆಯ ಶಿಕ್ಷಕರು ಹಾಗೂ ನಗರಸಭೆ ಸದಸ್ಯರು ಮನವಿ ಮಾಡಿಕೊಂಡಿರುತ್ತಾರೆ. ಅಲ್ಲದೆ ಈ ಕುರಿತು ಸ್ಥಳೀಯ ಸಾರ್ವಜನಿಕರು ಹಾಗೂ ನಗರಸಭೆ ಸದಸ್ಯರಾದ ಶ್ರೀಮತಿ ರೇಷ್ಮಾ ಮಾರಬಸರಿ ರವರು ನಗರಸಭೆಯ ಅಧಿಕಾರಿಗಳಿಗೆ ಸಾಕಷ್ಟು ಬಾರಿ ತಿಳಿಸಿದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲಾ ಎಂದು ಮಾಹಿತಿ ನೀಡಿ ನನಗೆ ಮನವಿ ಪತ್ರ ಸಲ್ಲಿಸಿದರು.

ಈ ಬಗ್ಗೆ ಸ್ಥಳದಲ್ಲಿ ಹಾಜರಿದ್ದ ನಗರಸಭೆ ಪೌರಾಯುಕ್ತರಿಗೆ ಕೇಳಲಾಗಿ ಸದರಿ ಇಟ್ಟಂಗಿ ಭಟಿಗಳು ಅನಧೀಕೃತವಾಗಿ ಕೃಷಿ ಸಾಗುವಳಿ ಭೂಮಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ನಡೆಯುತ್ತಿರುವದಾಗಿ ಹಾಗೂ ಇಟ್ಟಂಗಿ ಭಟಿಗಳ ಮಾಲೀಕರಿಗೆ ಇಟ್ಟಂಗಿ ಭಟಿಗಳನ್ನು ಸ್ಥಗಿತಗೊಳಿಸುವಂತೆ ನೋಟಿಸ್‌ಗಳನ್ನು ನೀಡಿರುತ್ತೇನೆಂದು ಹೇಳಿರುತ್ತಾರೆ.

ಸದರಿ ಶಾಲೆಯಿಂದ ಸುಮಾರು 50 ಮೀಟರ್ ಒಳಗಡೆ ಇರುವ ಖುಲ್ಲಾ ಜಾಗೆಯಲ್ಲಿ ಪರವಾನಿಗೆ ಇಲ್ಲದೆ ಅನಧೀಕೃತ 4 ಕಿಂತ ಹೆಚ್ಚು ಇಟ್ಟಂಗಿ ಭಟಿಗಳನ್ನು ತಯಾರು ಮಾಡುತ್ತಿರುವುದು ನಿಜ ಇದ್ದು, ಅದರಿಂದ ಕಾರ್ಬನ್ ಮಿಶ್ರಿತ ಬೂದಿಯು ಶಾಲಾ ಕೊಠಡಿ ಹಾಗೂ ಆಹಾರ ಕೊಠಡಿಯಲ್ಲಿ ಅಲ್ಲದೆ ಇಲ್ಲಿ 3, 4 ಮತ್ತು 5 ವರ್ಷದ ಮಕ್ಕಳ ನಲಿಕಲಿ ಕೊಠಡಿ ಇತರೆ ಕೊಠಡಿಗಳನ್ನು ಪರಿಶೀಲಿಸಿದಾಗ ಬೂದಿಯು ನೆಲದ ಮೇಲೆ ಗೋಡೆಯ ಮೇಲೆ ಪುಸ್ತಕ ಹಾಗೂ ಶಿಕ್ಷಕರು ಕೂಡುವ ಕುರ್ಚಿಯ ಮೇಲೆ ಇತರೆ ಕಡೆ ಬಿದ್ದಿರುವುದು ಕಂಡು ಬಂದಿರುತ್ತದೆ. ಶಾಲೆಯ ಹಿಂದುಗಡೆ ಉರ್ದು ಶಾಲೆ ಹಾಗೂ ಶಾಲೆಯ

ಮುಂಬಾಗದಲ್ಲಿ 30 ಹಾಸಿಗೆಗಳ ಹೆರಿಗೆ ಆಸ್ಪತ್ರೆ ಇರುತ್ತದೆ. ಇವುಗಳಿಗೂ ಕೂಡ ಇಟ್ಟಂಗಿ ಭಟಿಗಳಿಂದ ತೊಂದರೆ ಆಗುತ್ತಿರುವದು ಕಂಡು ಬಂದಿರುತ್ತದೆ.

ಈ ಕುರಿತು ಸ್ಥಳದಲ್ಲಿ ಹಾಜರಿದ್ದ ನಗರಸಭೆ ಅಧಿಕಾರಿಯವರಾದ ಶ್ರೀ ರಾಮಕೃಷ್ಣ ಸಿದ್ದಣ್ಣಕೊಳ್ಳ ಇವರು ಪರವಾನಿಗೆ ಇಲ್ಲದೆ ಅನಧೀಕೃತ ಇಟ್ಟಂಗಿ ಭಟಿಗಳನ್ನು ಬಂದ ಮಾಡುವ ಬಗ್ಗೆ ಇಲ್ಲಿಯವರೆಗೆ ಯಾವುದೇ ರೀತಿಯ ಕ್ರಮ ಜರುಗಿಸದೇ ಇರುವ ಬಗ್ಗೆ ಕಂಡು ಬಂದಿರುತ್ತದೆ. ಈ ವಿಷಯನನ್ನು ಗಂಭೀರವಾಗಿ ತೆಗೆದುಕೊಂಡು ಪರವಾನಿಗೆ ಇಲ್ಲದೆ ಅನಧೀಕೃತವಾಗಿ ಇಟ್ಟಂಗಿ ಭಟಿಗಳನ್ನು ನಡೆಸುತ್ತಿರುವವರ ವಿರುದ್ಧ ಎಫ್ಐಆರ್ ದಾಖಲಿಸಿ ಕ್ರಮ ಜರುಗಿಸಬೇಕೆಂದು ಸೂಚಿಸಿರುತ್ತೇನೆ.

ಈ ಕುರಿತು ಕ್ರಮ ಕೈಗೊಳ್ಳದೆ ಇರುವ ಸಂಬಂಧಪಟ್ಟ ನಗರಸಭೆ ಅಧಿಕಾರಿಗಳಾದ ಶ್ರೀ ರಾಮಕೃಷ್ಣ ಸಿದ್ದಣ್ಣಕೊಳ್ಳ, ಪರಿಸರ ಮಾಲಿನ್ಯ ಅಧಿಕಾರಿಯವರಾದ ರಾಜಶೇಖರ ಪುರಾಣಿಕ್ ಹಾಗೂ ತಾಲೂಕು ದಂಡಾಧಿಕಾರಿಯಾದ ಶ್ರೀ ಬಸವರಾಜ ಮೆಳವಂಕಿ ಇವರು ಕೂಡ ಪರವಾನಿಗೆ ಇಲ್ಲದೆ ಅನಧೀಕೃತವಾಗಿ ನಡೆಸುತ್ತಿರುವ ಇಟ್ಟಂಗಿ ಭಟಿಗಳ ಮೇಲೆ ಯಾವುದೇ ಕ್ರಮ ಜರುಗಿಸದೆ ಇರುವದು ಹಾಗೂ ಕರ್ತವ್ಯದಲ್ಲಿ ನಿಷ್ಕಾಳಜಿತನ ತೋರಿಸಿರುವದು ಕಂಡು ಬಂದಿರುತ್ತದೆ. ಕಾರಣ ಸದರಿ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಮಾನ್ಯರವರಲ್ಲಿ ನಿವೇದಿಸಿಕೊಳ್ಳಲಾಗಿದೆ.

ತಮ್ಮ ವಿಶ್ವಾಸಿ,

(ಅನಿತಾ ಹದ್ದಣ್ಣವರ್ ಐಪಿಎಸ್.)

2. The report extracted above indicates that four Brick factories are being run unauthorisedly near Government School and Urdu School; the said factories are emanating dust and smoke which is causing Air pollution due to which the students are facing inconvenience for studying in the said

school; the Commissioner, City Municipal Council is stated to have issued notice to the owners of Brick factories to stop the activities; however they have not yet stopped. On account of carbon dioxide emanating from the Brick factories, the students who are studying in the Government Primary School and Urdu School situated at Gowleraguwi Oni, Ilakal, Bagalkote District are likely to suffer serious health hazards. However, according to the report, the Commissioner, CMC, Ilakal, Environmental Officer, Bagalkote and Taluk Executive Magistrate have failed to take action against the owners of Brick factories.

3. It is relevant to point out that the owners of Brick factories are required to take necessary permission from the Pollution Control Board under the provisions of the Air Act (Prevention and Control of Pollution) Act, 1981. However, in the case on hand, as could be seen from the report extracted above, the owners of the Brick factories

have not taken any permission and they are running the same unauthorisedly and that too in agricultural lands. Therefore, it is the duty and responsibility of the Pollution Control Board as well as the Tahasildar to take steps against the owners of Brick factories, who are running the same unauthorisedly with a view to prevent the Air pollution being caused to the students of Government School and make the School atmosphere conducive for their studies.

4. Further, the Pollution Control Board is also empowered under Sec.5 of the Environment (Protection) Act, 1986 to give directions in writing to any person for closure, prohibition or regulation of any industrial operation or process and also for stoppage or regulation of supply of electricity or water or any other service. Further, under Sec. 10 of the said Act, the Pollution Control Board is also empowered to seize any equipment, industrial plant etc., to prevent or mitigate environmental

pollution. It is also relevant to point out that whoever fails to comply with or contravenes any of the provisions under the Environment (Protection) Act, 1986 is liable for punishment under Sec. 15 of the said Act. Therefore, the concerned authority are required to take immediate steps under the provisions referred to above to prevent the environmental pollution. As observed earlier, prima-facie there is dereliction of duties of the concerned officers who are entrusted with the responsibility of preventing the air pollution and also establishing unauthorized brick factory in the agricultural lands.

5. In the light of what is stated above, the various issues referred to in the report extracted above are prima-facie sufficient to exercise my suo-motu power under Sec. 7(2) and 9(3)(a) of the Karnataka Lokayukta Act, 1984. Accordingly, I hereby exercise my suo-motu powers and initiate a suo-motu proceeding. The office is directed to register this proceeding as suo-motu proceeding.

**6. In this connection, it is desirable to implead the following officers/officials as respondents for the purpose of investigation and seek their comments/reply.**

**(1)Sri. Ramakrishna Siddannakolla, Municipal Commissioner, City Municipal Council, Ilakal, Bagalkote District.**

**(2)Sri. Rajashekhar Puranik, Environmental Officer, KSPCB, Bagalkote.**

**(3)Sri. Basavaraj Melavanki, Tahasildar, Ilakal, Bagalkote District.**

7. The officers referred to above are directed to submit their comments within four weeks from the date of receipt of this order with regard to the steps taken by them to prevent air pollution and against establishment of unauthorized brick factories in the agricultural lands.

8. The Deputy Commissioner, Bagalkot District shall examine the issues referred to in the report submitted by the S.P., Karnataka Lokayukta, Bagalkote/Vijayapura and take remedial measures

to prevent the air pollution being caused on account of the establishment of unauthorized brick factories at Ilakal and submit a report to this authority.

9. Communicate a copy of this order along with copy of the report of the S.P., Karnataka Lokayukta, Vijayapura/Bagalkote to the respondents to enable them to submit their comments and also communicate copy of this order to the Deputy Commissioner, Bagalkote District for his information and taking remedial measures and to submit a report to this authority.

**List this matter on 05.07.2022 at 3.30 p.m. The respondents are directed to appear for hearing on the said date.**

2/6/22

**(Justice B.S. PATIL),**
Upalokayukta-1,
Karnataka State.

10. ARLO-4 (Complaints Section)

o June 2022
15:29

ಹೊಸ ದಿಗಂತ 13
06 Jun 2022

# ಅಧಿಕಾರಿಗಳ ಮೇಲೆ ಲೋಕಾಯುಕ್ತ ಕೇಸ್ ದಾಖಲು

[illegible]



[illegible]

ಪ್ರಜಾವಾಣಿ

# ಸಾರ್ವಜನಿಕ ಆಸ್ಪತ್ರೆ ಅವ್ಯವಸ್ಥೆ: ನಾಲ್ವರ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಇಳಕಲ್: ಉಪಲೋಕಾಯುಕ್ತ ಬಿ.ಎಸ್. ಪಾಟೀಲ ಅವರು ಮೇ 23ರಂದು ಇಲ್ಲಿಯ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕಂಡು ಬಂದ ಅವ್ಯವಸ್ಥೆಗೆ ಸಂಬಂಧಿಸಿದಂತೆ ಡಿಎಚ್ಒ ಡಾ.ಜಯಶ್ರೀ ಎಮ್ಮಿ ಸೇರಿದಂತೆ ನಾಲ್ವರ ವಿರುದ್ಧ ನಿರ್ಲಕ್ಷ್ಯದ ಆರೋಪದ ಮೇಲೆ ಸ್ವಯಂಪ್ರೇರಿತ (ಸು-ಮೋಟೋ) ಪ್ರಕರಣ ದಾಖಲಿಸಲಾಗಿದೆ.

100 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಕೊಠಡಿ ಇಲ್ಲದಿರುವುದು, ಫಿಜಿಷಿಯನ್ ಹುದ್ದೆ ಖಾಲಿ ಇರುವುದು, ರೋಗಿಗಳನ್ನು ಚಿಕಿತ್ಸೆಗಾಗಿ ಬಾಗಲಕೋಟೆಗೆ ಕಳುಹಿಸುವುದು, ಬೆಡ್ ಮತ್ತು ಡ್ರಿಪ್ ಸ್ಟ್ಯಾಂಡ್ ಸರಿಯಾಗಿ ನಿರ್ವಹಣೆ ಮಾಡದೇ ಇರುವುದು, ಎಕ್ಸರೆ ಹಾಗೂ ಡ್ರೆಸ್ಸಿಂಗ್ ಕೊಠಡಿ ನಿರ್ವಹಣೆ ಮಾಡದೇ ಇರುವುದು, ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಕರ್ತವ್ಯಕ್ಕೆ ಗೈರು ಹಾಜರಿರುವುದು ಹಾಗೂ ವೈದ್ಯಾಧಿಕಾರಿಗಳು ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸುವುದು, ಶೌಚಾಲಯಗಳು ಬಳಕೆಗೆ ಯೋಗ್ಯವಾಗಿಲ್ಲ ಎಂದು ಉಪ ಲೋಕಾಯುಕ್ತರು ಆರೋಪಗಳ ಪಟ್ಟಿ ಮಾಡಿದ್ದಾರೆ.

ಈ ಎಲ್ಲ ನ್ಯೂನತೆಗಳನ್ನು ಸರಿಪಡಿಸದೇ ನಿರ್ಲಕ್ಷ್ಯ ವಹಿಸಿದ ಆರೋಪದ ಮೇಲೆ ಜಿಲ್ಲಾ ವೈದ್ಯಾಧಿಕಾರಿ ಡಾ.ಜಯಶ್ರೀ ಎಮ್ಮಿ, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ನವೀನಕುಮಾರ ಶಂಕ್ರಪ್ಪ, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ಶಂಕ್ರಪ್ಪ ನಾಗಲಿಂಗಪ್ಪ ಗೋಗಿ, ನಿರ್ಮಿತಿ ಕೇಂದ್ರದ ವಿಭಾಗೀಯ ಅಧಿಕಾರಿ ಹಾಲೇರಾವ್ ಗುರುಲಿಂಗ ಸರದೇಸಾಯಿ ಮೇಲೆ ಪ್ರಕರಣ ದಾಖಲಿಸಿದ್ದು ನೋಟಿಸ್ ನೀಡಲಾಗಿದೆ ಎಂದು ಲೋಕಾಯುಕ್ತ ಇನ್‌ಸ್ಪೆಕ್ಟರ್ ಮಹೇಂದ್ರ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣ: ಗೌಳೇರ ಗುಡಿಯ 30 ಹಾಸಿಗೆಗಳ ಹೆರಿಗೆ ಹಾಗೂ ಚಿಕ್ಕ ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರು ಸೇರಿದಂತೆ ಅಗತ್ಯ ಸಿಬ್ಬಂದಿ ನಿಯೋಜಿಸದೇ ಇರುವುದಕ್ಕೆ ಹಾಗೂ ಆಸ್ಪತ್ರೆಯ ಹತ್ತಿರದ ಇಟ್ಟಂಗಿ ಭಟ್ಟಿಗಳನ್ನು ತೆರವುಗೊಳಿಸದೇ ಇರುವುದಕ್ಕೆ ಜಿಲ್ಲಾ ವೈದ್ಯಾಧಿಕಾರಿ ಡಾ.ಜಯಶ್ರೀ ಎಮ್ಮಿ, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ನವೀನಕುಮಾರ ಶಂಕ್ರಪ್ಪ ಹಾಗೂ ಬಾಗಲಕೋಟೆಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ರಾಜೇಸಾಬ ಅವರ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ.

## ಅಕ್ರಮ ಇಟ್ಟಂಗಿ ಭಟ್ಟಿ: ಪೌರಾಯುಕ್ತರ ವಿರುದ್ಧ ಪ್ರಕರಣ

ಉಪಲೋಕಾಯುಕ್ತರ ಭೇಟಿ ಸಂದರ್ಭದಲ್ಲಿ ಸಾರ್ವಜನಿಕರು ಗೌಳೇರಗುಡಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಹೊಂದಿಕೊಂಡಂತೆ ಅನಧಿಕೃತ ಇಟ್ಟಂಗಿ ಭಟ್ಟಿಗಳಿವೆ. ಭಟ್ಟಿಗಳ ಹೊಗೆ ಹಾಗೂ ಧೂಳು ಮಕ್ಕಳ ಹಾಗೂ ಸಾರ್ವಜನಿಕರ ಆರೋಗ್ಯಕ್ಕೆ ಮಾರಕವಾಗಿದೆ. ಈ ಬಗ್ಗೆ ನಗರಸಭೆ ಪೌರಾಯುಕ್ತರ ಗಮನಕ್ಕೆ ತಂದು, ಸ್ಥಳಾಂತರಿಸುವಂತೆ ಒತ್ತಾಯಿಸಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ದೂರಿದ್ದರು.

ಈ ದೂರಿನ ಅನ್ವಯ ಉಪಲೋಕಾಯುಕ್ತರು ವಿಜಯಪುರದ ಲೋಕಾಯುಕ್ತ ಎಸ್‌ಪಿ ಅವರ ಮೂಲಕ ವರದಿ ಪಡೆದು ನಗರಸಭೆ ಪೌರಾಯುಕ್ತ ರಾಮಕೃಷ್ಣ ಸಿದ್ದನಕೊಳ್ಳ, ಬಾಗಲಕೋಟೆಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ರಾಜೇಸಾಬ ಪುರಾಣಿಕ ಹಾಗೂ ತಹಶೀಲ್ದಾರ್ ಬಸವರಾಜ ಮೆಳವಂಕಿ ಅವರ ವಿರುದ್ಧ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ.